ಶ್ರೀ ಆರ್. ಎಲ್. ಜಾಲಪ್ಪ.—ಯಾವ ಯಾವ ಸಹಕಾರ ಸಂಘದಲ್ಲಿ ಎಷ್ಟೆಷ್ಟು ದುರುಪಯೋಗ ಆಗಿದೆ, ಏನು ಕ್ರಮ ಕೈಗೊಂಡಿದೆ ಎಂಬ ಪಟ್ಟಿ ಮಾಡಿಸಿದ್ದೇನೆ. ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿಕೊಡುತ್ತಿದ್ದೇವೆ. ಪೂರ್ತಿ ವಿವರಗಳು ಅದರಲ್ಲಿವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ೧೯೮೪-೮೫ರಲ್ಲಿ ೫೧೮ ಸಹಕಾರ ಸಂಘಗಳಲ್ಲಿ, ೧೯೮೫-೮೬ರಲ್ಲಿ ೫೩೮ ಸಹಕಾರ ಸಂಘಗಳಲ್ಲಿ ನಷ್ಟ ಬಂದಿದೆ ಎಂದು ತಿಳಿಸುತ್ತಿದ್ದಾರೆ. ಈ ರೀತಿ ನಷ್ಟ ಆಗುತ್ತಿರುವ ಬಗ್ಗೆ ತನಿಖೆ ಮಾಡಿ ತೀರಾ ನಷ್ಟದಲ್ಲಿರುವ ಸಂಸ್ಥೆಗಳನ್ನು ಮುಚ್ಚುವಂಥ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದೀಚೆಗೆ ಸುಮಾರು ೪ ಸಾವಿರ ಸಂಘಗಳನ್ನು ಸಮಾಪನೆಗೊಳಿಸಿದ್ದೇವೆ. ೧೧೧ ಸಹಕಾರ ಸಂಘಗಳನ್ನು ನಿಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲಿಕ್ವಿಡೇಟ್ ಮಾಡುತ್ತಿದ್ದೇವೆ. ಇನ್ನು ಯಾವ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅದನ್ನೂ ಮುಚ್ಚುವುದಕ್ಕೆ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಕಡೆಯದಾಗಿ ಉತ್ತರ ಕೊಡುತ್ತಾ ೧೭ ಸಹಕಾರ ಸಂಘಗಳಲ್ಲಿ ೧೨ಳ ಹಣ ದುರುಪಯೋಗದ ಪ್ರಕರಣಗಳು ಗಮನಕ್ಕೆ ಬಂದಿವೆ, ೮೭ ಕ್ರಿಮಿನಲ್ ಮೊಕದ್ದಮೆ ಹಾಗೂ ೯ಳ ಸಿವಿಲ್ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದಾರೆ. ಮೊಕದ್ದಮೆಗಳ ತನಿಖೆಯಾಗಿ ಈ ಸಹಕಾರ ಸಂಘಗಳಿಂದ ಹಣ ಜಮೆ ಆಗಿದೆಯೆ? ಎಷ್ಟು ಜನರಿಗೆ ಹೀಗಾಗಿದೆ? ಅದರ ಹೆಸರು ತಿಳಿಸಬಹುದಾ?

ಶ್ರೀ ಆರ್. ಎಲ್. ಜಾಲಪ್ಪ.—ಹಲವು ಸಂದರ್ಭಗಳಲ್ಲಿ ಹಣ ವಸೂಲಾಗಿದೆ. ಇನ್ನೂ ಹಲವು ಸಂದರ್ಭದಲ್ಲಿ ಹಣ ವಸೂಲಾಗುತ್ತಿಲ್ಲ. ಶಿತ್ತೋಳ್ ಸಹಕಾರ ಸಂಘದ ಬಗ್ಗೆ ಸಿ. ಒ. ಡಿ. ಗೆ ರೆಫರ್ ಮಾಡಿದ್ದೇವೆ. ವರದಿ ಇನ್ನೂ ಬಂದಿಲ್ಲ. ಉಳಿದ ಸೊಸೈಟಿಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ. ಯಾವ್ಯಾವ ಸಂಘಗಳಲ್ಲಿ ಹಣ ವಸೂಲಾಗಿದೆ? ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ೯೭ ಸಹಕಾರ ಸಂಘಗಳ ವಿಚಾರದಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಅದನ್ನು ಮಾನ್ಯ ಸದಸ್ಯರು ನೋಡಬಹುದು.

ನೂಲಿನ ಗಿರಣಿಗಳ ಮಂಜೂರು ಬಗ್ಗೆ.

೧೧ (೧೯೦) ಶ್ರೀ ಕೆ. ಬಿ. ಕೊಳಿವಾಡ (ರಾಣಿ ಬೆನ್ನೂರು) ಈ ಕೆಳಕಂಡ ಪ್ರಶ್ನೆಗಳಿಗೆ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಎಷ್ಟು ಸಹಕಾರಿ ನೂಲಿನ ಗಿರಣಿಗಳು ಮಂಜೂರು ಆಗದೆ ಉಳಿದಿವೆ ?

ಆ) ಸದರಿ ನೂಲಿನ ಗಿರಣಿಗಳ ಮಂಜೂರಾತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಸದರಿ ಮಂಜೂರಾತಿ ಪಡೆಯದೆ ಇರತಕ್ಕಂಥ ನೂಲಿನ ಗಿರಣಿಗ ಲ್ಲಿ ಯಾವ ಯಾವ ನೂಲಿನ ಗಿರಣಿಗಳಿಗೆ ರಾಜ್ಯ ಸರ್ಕಾರ ಷೇರು ಹಣವನ್ನು ಬಿಡುಗಡೆ ಮಾಡಿದೆ ಮತ್ತು ಉಳಿದ ಗಿರಣಿ ಗಳಿಗೆ ಏಕೆ ಬಿಡುಗಡೆಮಾಡಿಲ್ಲ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈಗಿನ ಮಾಹಿತಿಯ ಪ್ರಕಾರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಅನ್ವಯ, ೮ ಸಹಕಾರ ನೂಲಿನ ಗಿರಣಿಗಳು ಕರ್ನಾಟಕದಲ್ಲಿ ನೋಂದಣಿಯಾಗಿರುತ್ತವೆ. ಅದರೆ ಇವುಗಳ ಸ್ಥಾಪನೆಗೆ ಭಾರತ ಸರ್ಕಾರದಿಂದ ಪರವಾನಗಿಯನ್ನು ಪಡೆಯಬೇಕಾಗಿದೆ.

ಆ) ಆ ೮ ಸಹಕಾರ ನೂಲಿನ ಗಿರಣಿಗಳ ಪೈಕಿ ೪ ಸಹಕಾರ ನೂಲಿನ ಗಿರಣಿಗಳನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಬಿಡಿಸಿ ಹಿಂದೆಯೇ ಅಂದರೆ ೧೯೮೬ರಲ್ಲಿ ಶಿಫಾರಸ್ಸು ಮಾಡಲಾಗಿದೆ. ಮತ್ತೆ ಮೂರು ಸಹಕಾರ ನೂಲಿನ ಗಿರಣಿಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ ೧೯೮೭ರಲ್ಲಿ ಶಿಫಾರಸ್ಸು ಮಾಡಲಾಗಿದೆ.

ಇ) ಮಹಾವೀರ ಸಹಕಾರ ನೂಲಿನ ಗಿರಣಿಗೆ ಸರ್ಕಾರವು ರೂ. ೫೦-೦೦ ಲಕ್ಷಗಳನ್ನು ಶೇರು ಬಂಡವಾಳವಾಗಿ ಮಂಜೂರು ಮಾಡಿದೆ. ಈ ನೂಲಿನ ಗಿರಣಿಗಳ ಪೈಕಿ ಯಾವುದೇ ನೂಲಿನ ಗಿರಣಿಯು ತನ್ನ ಸ್ಥಾಪನೆಗೆ ಭಾರತ ಸರ್ಕಾರದಿಂದ ಪರವಾನಗಿಯನ್ನು ಪಡೆದುಕೊಂಡಿಲ್ಲದ ಕಾರಣ ರಾಜ್ಯ ಸರ್ಕಾರವು ಶೇರು ಬಂಡವಾಳವನ್ನು ಈ ನೂಲಿನ ಗಿರಣಿಗಳಿಗೆ ಬಿಡುಗಡೆ ಮಾಡುವುದರಲ್ಲಿ ಯಾವ ರೀತಿಯ ಉಪಯೋಗವೂ ಆಗಲಾರದು.

ANNEXE

Sl. No	Subject	Government reference recommending the proposal to NCDC	Project cost (Rs. in lakhs)
1	Mahaveer Co-operative Spinning Mills Ltd. Bedkihal, Belgaum District.	RDC 33 CIM 81 dated : 12-3-1982	766-00
2	Siddeshwara Cooperative Spininning Mills Ltd. Chikodi, Belgaum District.	RDC 1 CIM 82 dated : 12-3-1982	778-00
3	Farmers Cooperative Spinning Mills Ltd. Ranebennur, Dharwad District.	RDC 4 CIM 82, dated : 12-3-1982	770-00
4	Sri Venkatesh Cooperative Textile Mills Ltd., Annigeri, Dharwad District.	RDC 5 CIM 82 dated : 12-3-1982	936-00
5	Mulgunda Cooperative Spinning Mills Ltd. Mulgunda, Dharwad District.	CMW 24 CIM 85 dated : 17-2-1986	101-00
6	Sahyadri Farmers Cooperative Spinning Mills Ltd. Channagiri.	RDC 15 CIM 84 dated : 9-7-1986	900-00
7	Sanjay Cooperative Spinning Mills Ltd. Hubli.	RDC 42 CIM 81 dated : 18-8-1986	870-00
8	Raibag Cooperative Spinning Mills Ltd. Raibag.	(Proposal has not yet been received from RCS)	

ಶ್ರೀ ಕೆ. ಬಿ. ಕೋಳಿವಾಡ.—ಈ ಸಹಕಾರಿ ನೂಲಿನ ಗಿರಣಿಯ ಬಗ್ಗೆ ೧೯೮೨ರಲ್ಲೇ ಶಿಫಾರಸ್ಸು ಮಾಡಿದ್ದೇವೆಂದು ಮಂತ್ರಿಗಳು ತಿಳಿಸಿದ್ದಾರೆ. ಆ ರೀತಿಯ ಶಿಫಾರಸ್ಸು ಮಾಡಿದ ನಂತರ ಮಂಜೂರಾತಿ ಪಡೆಯುವುದಕ್ಕೆ ರಾಜ್ಯ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಂಡಿದೆ ಎಂಬ ನನ್ನ ಪ್ರಶ್ನೆಗೆ ಉತ್ತರ ಇಲ್ಲ. ಮಹರಾಷ್ಟ್ರದಲ್ಲಿ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯದೇ ಇನ್ನೂರಾ

ಕೆಲವು ನೂಲಿನ ಗಿರಣಿಗಳನ್ನು ಸ್ಥಾಪನ ಮಾಡತಕ್ಕ ಧೈರ್ಯವನ್ನು ರಾಜ್ಯ ಸರ್ಕಾರ ಮಾಡಿದೆ. ಅದೇ ರೀತಿಯ ಧೈರ್ಯವನ್ನು ನಮ್ಮ ಕರ್ನಾಟಕ ರಾಜ್ಯ ಸರ್ಕಾರವೂ ಮಾಡುವುದಕ್ಕೆ ಸಾಧ್ಯ ಇದೆಯೇ ? ಮಂಜೂರಾತಿ ಪಡೆಯದೇ ಇರತಕ್ಕ ೮ ಸಹಕಾರಿ ನೂಲಿನ ಗಿರಣಿಗಳ ಬಗ್ಗೆ ಕೇವಲ ಮಹಾವೀರ ನೂಲಿನ ಗಿರಣಿಗೆ ೫೦ ಲಕ್ಷ ರೂಪಾಯಿಗಳ ಷೇರು ಬಂಡವಾಳವನ್ನು ಸರ್ಕಾರ ಕೊಟ್ಟಿದೆ. ಅದೇ ರೀತಿಯಲ್ಲಿ ರಾಣಿ ಬೆನ್ನೂರಿನಲ್ಲಿ ಇನ್ನೊಂದು ನೂಲಿನ ಗಿರಣಿ ಪ್ರಾರಂಭ ಮಾಡುವುದಕ್ಕೆ ಷೇರು ಹಣವನ್ನು ಕಲೆಕ್ಟ್ ಮಾಡಿದ್ದು, ಇದರಲ್ಲಿ ಶೇಕಡಾ ೨೦ ರಷ್ಟು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಸದಸ್ಯರೇ ಇದ್ದರೂ ಅದಕ್ಕೆ ಸರ್ಕಾರ ಷೇರು ಬಂಡವಾಳವನ್ನು ಕೊಡದೇ ಇರುವುದಕ್ಕೆ ಕಾರಣ ಏನು ? ಮುಂದಾದರೂ ಸರ್ಕಾರ ಇದಕ್ಕೂ ಷೇರು ಬಂಡವಾಳವನ್ನು ಕೊಡುವುದಕ್ಕೆ ವಿಚಾರ ಮಾಡುತ್ತದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ರಾಣಿಬೆನ್ನೂರಿನಲ್ಲಿ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಆನುಮತಿಯನ್ನು ನೀಡಲಾಗಿದ್ದು ಸಿವಿಲ್ ಕೆಲಸ ಪ್ರಾರಂಭವಾಗಿದ್ದು ಮಿಷನರೀಸ್‌ಗಳು ಕೂಡ ಈಗಾಗಲೇ ಬರುತ್ತಿರುವುದರಿಂದ. ಅದೇ ಸ್ಥಳದಲ್ಲಿ ಇನ್ನೊಂದಕ್ಕೆ ಪರವಾನಗಿಯನ್ನು ಕೊಡುವುದರಲ್ಲಿ ಅರ್ಥವಿಲ್ಲ ಎಂಬುದು ನನ್ನ ಭಾವನೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀವೆಂಬುದು ಶ್ರೀಮಾನ್ ಕೆ. ಪೆಚ್. ಪಾಟೀಲ್‌ರವರಿಗೆ ಗೊತ್ತಿದೆ. ಮಹಾರಾಷ್ಟ್ರಕ್ಕೆ ಹೆಚ್ಚು ನೂಲಿನ ಗಿರಣಿಗಳು ಹೋಗಿವೆ ಎಂಬುದಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವೂ ಪ್ರಯತ್ನಮಾಡಿ ೩ ನೂಲಿನ ಗಿರಣಿಗಳಿಗೆ ಸಹಾಯೋಧನವನ್ನು ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದೇವೆ. ಒಂದಕ್ಕೆ ಎನ್. ಸಿ.ಡಿ. ಸಿ. ಯವರಿಂದ ಸಹಾಯವನ್ನು ಪಡೆದುಕೊಂಡಿದ್ದೆವೆ. ಇನ್ನೊಂದಕ್ಕೆ ವಿಶ್ವ ಬ್ಯಾಂಕಿನ ಪತಿಯಿಂದ ಸಹಾಯವನ್ನು ಪಡೆದುಕೊಂಡಿದ್ದೇವೆ. ಮಗದೊಂದಕ್ಕೆ ವಿಶ್ವಬ್ಯಾಂಕಿನ ವತಿಯಿಂದ ಸಹಾಯವನ್ನು ಪಡೆದುಕೊಂಡಿದ್ದೇವೆ. ಮಗದೊಂದಕ್ಕೆ ವಿಶ್ವ ಬ್ಯಾಂಕಿನಿಂದ ನೆರವು ಇನ್ನು ಕೆಲವೇ ದಿವಸಗಳಲ್ಲಿ ಸಿಕ್ಕುವುದು ಇದೆ. ಇನ್ನೊಂದಕ್ಕೂ ಮೊದಲೇ ಶಿಫಾರಸ್ಸು ಮಾಡಿ ಕಳುಹಿಸಲಾಗಿತ್ತು. ಅಲ್ಲಿ ಹತ್ತಿಯನ್ನು ಚಾಸ್ತಿ ಬೆಳೆಯುತ್ತಿಲ್ಲ, ಅದರ ಬದಲು ಹೊಗೆಸೊಪ್ಪನ್ನು ಬೆಳೆಯಲಾಗುತ್ತಿದೆ ಎಂಬುದಾಗಿ ಇತ್ತೀಚೆಗೆ ನನಗೊಂದು ವರದಿ ಬಂದಿದೆ. ಅದರ ಬದಲು ಬೇರೊಂದಕ್ಕೆ ಶಿಫಾರಸ್ಸು ಮಾಡಲಾಗುವುದು. ಮಹಾವೀರ ನೂಲಿನ ಗಿರಣಿ ಮಾತ್ರ ಏಕೆ ಷೇರು ಹಣವನ್ನು ಕೊಟ್ಟಿದ್ದೀರಿ ಎಂಬುದಾಗಿ ಮಾನ್ಯ ಸದಸ್ಯರು ಕೇಳಿದ್ದಾರೆ. ಮಹಾವೀರ ನೂಲಿನ ಗಿರಣಿ ರಿಜಿಸ್ಟರ್ ಆಗಿದ್ದು ೧೯೬೮-೬೯ರಲ್ಲಿ. ಕಳೆದ ೧೨ ವರ್ಷಗಳಿಂದಲೂ ಪೆಂಡಿಂಗ್‌ನಲ್ಲಿತ್ತು. ಅವರು ೩೦ ಲಕ್ಷ ರೂಪಾಯಿಗಳ ಷೇರು ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಅವರಿಗೆ ಸರ್ಕಾರದ ಷೇರು ಹಣವನ್ನು ಕೊಟ್ಟರೆ ಸಹಾಯವಾಗಬಹುದು ಎಂಬ ಉದ್ದೇಶದಿಂದ ಕೊಟ್ಟಿದ್ದೇವೆ. ಅದಕ್ಕೆ ಎನ್. ಸಿ. ಡಿ. ಸಿ. ಯವರು ಮಂಜೂರಾತಿಯನ್ನು ನೀಡಿಲ್ಲವಾದ್ದರಿಂದ ಆ ಹಣವನ್ನು ಟ್ರೆಜರಿಯಲ್ಲಿಟ್ಟಿದ್ದೇವೆ. ಅವರಿಗೆ ರಿಲೀಸ್ ಮಾಡಿಲ್ಲ.

ಶ್ರೀ ಕೆ. ಪೆಚ್. ಪಾಟೀಲ್.—ಮಾನ್ಯ ಮಂತ್ರಿವರ್ಯರು ಸಮಂಜಸವಾದ ಉತ್ತರವನ್ನು ಮೊದಲು ಹೇಳಿದ್ದರು. ೮ ಮಿಲ್ಲುಗಳ ಪೈಕಿ ೭ ಮಿಲ್ಲುಗಳ ಬಗ್ಗೆ ಶಿಫಾರಸ್ಸು ಮಾಡಲಾಗಿದ್ದು ಅವುಗಳು ಎನ್. ಸಿ.ಡಿ. ಸಿ. ಯಲ್ಲಿ ಪೆಂಡಿಂಗ್‌ನಲ್ಲಿವೆ ಎಂಬುದಾಗಿ ಆಳಿಸಿದ್ದು ಅದರಲ್ಲಿ ರಾಣಿಬೆನ್ನೂರಿನ ಹತ್ತಿನ ನೂಲಿನ ಗಿರಣಿಯೂ ಸೇರಿದೆ. ಏಕೆ ಉಳಿದಿವೆ ಎಂದರೆ ಎನ್.ಸಿ.ಡಿ.ಸಿ. ಯಲ್ಲಿರುವ ಟೆಕ್ಸ್‌ಟೈಲ್ ಕಮಿಷನರ್ ಲೈಸೆನ್ಸ್ ಕೊಟ್ಟಿಲ್ಲ ಎಂಬುದಾಗಿ ಹೇಳಿದ್ದಾರೆ. ನೀವು ಮೊದಲೇ ಶಿಫಾರಸ್ಸು ಮಾಡುವುಕ್ಕೆ ಮೊದಲು ಪ್ರತಿಯೊಂದು ವಿಚಾರವನ್ನು ಸೂಕ್ತವಾಗಿ ಪರಿಶೀಲಿಸಿ ರಾಜ್ಯದ ಹಿತದೃಷ್ಟಿಯಿಂದ ವ್ಯವಸಾಯಗಾರರ ಹಿತದೃಷ್ಟಿಯಿಂದ ಇವುಗಳು ಎಲ್ಲಿ ಫಿಟ್ಟಿನ್ ಆಗುತ್ತವೆ ಅಂತಹ ಸ್ಥಳಗಳಲ್ಲಿ ಇವುಗಳನ್ನು ಮಾಡಬೇಕೆಂದರೆ ಟೆಕ್ಸ್‌ಟೈಲ್ ಕಮಿಷನರ್ ಒಪ್ಪಿಗೆಯನ್ನು ಕೊಟ್ಟೇ ಕೊಡುತ್ತಾರೆ ಆದರೆ ಎಲ್ಲಿ ಫಿಟ್ಟಿನ್ ಆಗುವುದಿಲ್ಲವೋ ಅಂತಹ ಸ್ಥಳಗಳಲ್ಲಿ ಮಾಡಬೇಕೆಂದು ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದೆ. ''ಎತ್ತು ಏರಿಗೆ ಎಳೆದರೆ-ಕೋಣ ನೀರಿಗೆ ಎಳೆಯಿತು'' ಎಂಬ ಗಾದೆಯಂತೆ ಇನ್ನು ಮುಂದೆ ಆ ರೀತಿ ಮಾಡಬೇಡಿ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ಭಾಷಣದಲ್ಲಿ ಯಾವುದೇ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುನ್ನ ವಿರೋಧ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತೀರ್ಮಾನ ಕೈಗೊಳ್ಳಲಾಗುವುದು ಎಂಬುದಾಗಿ ತಿಳಿಸಿದ್ದಾರೆ. ಅದರಿಂದ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿ. ಎಕ್ಸ್‌ಪೋರ್ಟ್ ಓರಿಯಂಟೇಷನ್ ಕಾರ್ಖಾನೆಗಳನ್ನು ಎಲ್ಲಿ ಮಾಡಬೇಕೆಂಬುದನ್ನು ತೀರ್ಮಾನಿಸಿ. ಮಹರಾಷ್ಟ್ರದಲ್ಲಿ ಎಕ್ಸ್‌ಪೋರ್ಟ್ ಓರಿಯಂಟೇಷನ್ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೂ ಲೈಸೆನ್ಸ್‌ನ್ನು ತೆಗೆದುಕೊಂಡಿದ್ದಾರೆ. ನೀವು ಇನ್ನೂ ಆ ಬಗ್ಗೆ ಪ್ರಯತ್ನ ಮಾಡಿಲ್ಲ. ನಾನೊಂದು ಪತ್ರವನ್ನೂ ಕೂಡ ಮಾನ್ಯ ಮಂತ್ರಿಗಳಿಗೆ ಬರೆದಿದ್ದೇನೆ. ಅದನ್ನು ಅವರು ಗಮನಿಸಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಪೆಚ್. ಪಾಟೀಲ್.—ಇವತ್ತಿಗೂ ಸಹಾ ನೀವು ಮುತ್ತು ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದವರನ್ನು ಗಮನದಲ್ಲಿ ಇಟ್ಟುಕೊಂಡು ಯಾವ ಯಾವ ಸಂಸ್ಥೆಗಳಿಗೆ ಯಾವ ಯಾವುದಕ್ಕೆ ಹಾಕಿದರೆ ಪೂರ್ತಿ ಲಾಭ ಬರುತ್ತದೆ ಎಂಬುದನ್ನು ನೋಡಬೇಕು. ಹೊಸದಾಗಿ ಮಾನ್ಯ ಜೆ.ಎಚ್. ಪಾಟೀಲರೂ ಒಂದು ಮಾತಾಡ್ಯಾರೆ. ರಫ್ತು ಮಾಡುವ ಕೈಗಾರಿಕೆಗಳ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರು ಬಹಳ ಪ್ರಾಮುಖ್ಯತೆ ಕೊಡುತ್ತಿರುವುದರಿಂದ ಇಂತಹ ಕೈಗಾರಿಕೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡಿ. ಹುಲಕೋಟಿಯಲ್ಲಿ ೨ ಮಿಲ್‌ಗಳು ಇದ್ದು ಇವೆರಡೂ ಸರಿಯಾಗಿವೆ. ರಾಣೆಬೆನ್ನೂರಿನಲ್ಲೂ ಕೂಡಾ ಹರಿಜನರನ್ನು ಹೆಚ್ಚಾಗಿ ಸದಸ್ಯರನ್ನಾಗಿ ಪಡೆದುಕೊಂಡು ಒಳ್ಳೆಯ ಉತ್ಪಾದನೆಯ ಕೆಲಸ ಮಾಡುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ರಾಣೆಬೆನ್ನೂರಿನಲ್ಲಿ ಏನು ಕೊಟ್ಟಿದ್ದೀರೆ ಅದನ್ನು ನೋಡೋಣ. ಒಂದೆರಡು ಮೂರು ಫ್ಯಾಕ್ಟರಿಗಳನ್ನು ಬಿಟ್ಟರೆ ಮಿಕ್ಕದ್ದರಲ್ಲಿ ನಮಗೆ ಕಹಿ ಅನುಭವವೇ ಜಾಸ್ತಿಯಾಗಿದೆ. ಇನ್ನು ಮಾನ್ಯ ಸದಸ್ಯರು ಏನು ಎಕ್ಸ್‌ಪೋರ್ಟ್ ಓರಿಯೆಂಟ್‌ನ್ನು ಗಮನದಲ್ಲಿ ಇಟ್ಟುಕೊಂಡು ವ್ಯವಸ್ಥೆ ಮಾಡಿ ವಿರೋಧಪಕ್ಷದವರನ್ನು ಕಾಂಟಾಕ್ಟ್ ಮಾಡಿ ಕೆಲಸ ಮಾಡಿ ಎಂದಿದ್ದಾರೆ ಅದು ಸೂಕ್ತ ಸಲಹೆ ಅದನ್ನು ಮಾಡುತ್ತೇವೆ.

ಶ್ರೀ ಕೆ. ಪೆಚ್. ಪಾಟೀಲ್.—ಸಹಕಾರ ಸಂಘಗಳೂ ಕೆಡುತ್ತವೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಹುಬ್ಬಳ್ಳಿ ಮಿಲ್, ಸರ್ಕಾರದ್ದು ಸರಿ ಇದೆಯೇ ? ಅದು ಸರಿಯಾಗಿ ನಡೆಯುತ್ತಿಲ್ಲ ಅದನ್ನು ಇವರಿಗೆ ಕೊಡಿ ಸರಿಯಾಗಿ ನಡೆಸುತ್ತಾರೆ. ನೀವು ಸಹಕಾರಿಗಳಾಗಿದ್ದು ಇವರ ಬಗ್ಗೆ ಪೂರ್ವಾಗ್ರಹಪೀಡಿತರಾಗುವುದು ಬೇಡ. ಆಲ್ಲಿ ಜನರು ಚೆನ್ನಾಗಿಲ್ಲದಿದ್ದರೆ ತೆಗೆದುಹಾಕಿ. ಜನರಿಗೆ ಕಲ್ಯಾಣ ಮಾಡುವ ಸಂಸ್ಥೆಗಳನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಸಹಕಾರಿ ತತ್ವ ತಮಗೆ ಚೆನ್ನಾಗಿ ತಿಳಿದಿದೆ. ದುರಾದೃಷ್ಟವಶಾತ್ ನಮ್ಮ ಅನುಭವ ಹಾಗಿಲ್ಲ. ಸಹಕಾರಿಗಳು ಬಹಳ ಜನರು ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ನಡೆಯುತ್ತಾ ಇಲ್ಲ. ಆದುದರಿಂದಲೇ ನಾವು ಕಾನೂನು ಬದಲಾವಣೆಗಳನ್ನು ಮಾಡುತ್ತಾ ಇರುವುದು. ಇವತ್ತು ಮನಸ್ಸನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನನ್ನ ಅನುಭವದಲ್ಲಿ ಇವತ್ತು ನಿಜವನ್ನು ಹೇಳಬೇಕೆಂದರೆ ಇನ್ನು ಮೇಲೆ ಸಹಕಾರಿಗಳಿಂದ ಈ ಸಕ್ಕರೆ ಕಾರ್ಖಾನೆ ಹಾಗೂ ಸ್ಪಿನ್ನಿಂಗ್ ಮಿಲ್‌ಗಳನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳು ತೆಗೆದುಕೊಂಡು ಮಾಡಲಿ ಎನಿಸಿಬಿಟ್ಟಿದೆ. ಇವರಿಂದ ನಾವು ಬೈಸಿಕೊಳ್ಳುವುದು ಸಾಕು. ಒಂದೆರಡು ಸರಿಯಾಗಿ ನಡೆಯುತ್ತಿರುಬಹುದು. ನಿಮಗೆ ಗೊತ್ತಿದೆ ನಿಮ್ಮ ಮೈದಡರಲ್ಲಿ ಬಡ್ಡಿ ಮಜಾ ಮಾಡಿ ಅಸಲನ್ನು ರಿಕವರಿ ಮಾಡಿದ್ದೇವೆ. ಆದರೆ ಇಲ್ಲಿ ಜವಾಬ್ದಾರಿ ಇಲ್ಲ. ಜವಾಬ್ದಾರಿಯಿಂದ ಉತ್ತರ ಕೊಡುವವರು ಇಲ್ಲ. ನಾವು ಬೇಕಾದಷ್ಟು ಆಫಿಶಿಯಲ್ಸ್ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಹಾಗೂ ೩೦ ಜನರನ್ನು ಡಿಸ್‌ಮಿಸ್ ಸಹಾ ಮಾಡಿದ್ದೇವೆ. ಈ ಇಲಾಖೆಯಲ್ಲಿ ನಾನ್ ಆಫಿಶಿಯಲ್ಸ್ ಮೇಲೆ ಹೇಗೆ ಕ್ರಮ ತೆಗೆದುಕೊಂಡು ಡಿಸ್‌ಮಿಸ್ ಮಾಡುತ್ತೀರಿ ? ಇವತ್ತು ಈ ಕೈಗಾರಿಕೆಗಳಿಂದ ನಮಗೆ ಕಹಿ ಅನುಭವ ಆಗಿದೆ. ನಾನೂ ಪಾಟೀಲರ ಹಿಸ್ಟರಿ ಪಳಗಿದವರೇ ಆಗಿದ್ದೇನೆ. ಮುಂದೆ ಕ್ರಮ ಕೈಗೊಳ್ಳುವಾಗ ನಿರ್ದಾಕ್ಷಿಣ್ಯವಾಗಿ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಬೆಳಗಾಂವಿ ಜಿಲ್ಲೆಯ ಪಂತ ಬಾಳೇಕುಂದ್ರಿಯಲ್ಲಿರುವ ನೂಲಿನ ಗಿರಣಿಯ ಬಗ್ಗೆ

೧೨ (೧೪೯) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳಗಾಂವಿ ಜಿಲ್ಲೆಯ ಪಂತ ಬಾಳೆಕುಂದ್ರಿಯಲ್ಲಿರುವ ನೂಲಿನ ಗಿರಣಿಯು ಪ್ರಾರಂಭ ಕಾಲದಲ್ಲಿದ್ದ ಉತ್ಪಾದಕರ ಸಂಖ್ಯೆ ಹಾಗೂ ಇನ್ನುಳಿದ ಸದಸ್ಯರ ಸಂಖ್ಯೆ ಎಷ್ಟು ?

ಆ) ಸದರಿ ಗಿರಣಿಗೆ ಪ್ರಾರಂಭದಿಂದಲೂ ಇಲ್ಲಿಯವರೆಗೆ ಪ್ರತಿ ವರ್ಷ ಆಗಿರುವ ನಷ್ಟದ ಪೂರ್ತಿ ವಿವರ ಎಷ್ಟು ?

ಇ) ನಷ್ಟಕ್ಕೆ ಒಳಪಟ್ಟಿರುವ ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿರುವ ಸದಸ್ಯರ ಮೇಲೆ ಸರ್ಕಾರದಿಂದ ತೆಗೆದುಕೊಳ್ಳುವ ಕ್ರಮವೇನು ?